ಧಾರ್ಮಿಕ ಆಚರಣೆಗಳು

❁ ಯಾರಿಗೆ ಭಗವಂತನ ಸಾಕ್ಷಾತ್ಕಾರ ದೊರೆತಿದೆಯೋ ಆತನಿಗೆ ಸಂಧ್ಯಾವಂದನಾದಿ ಕರ್ಮಗಳು ಇರುವುದಿಲ್ಲ. ಆತನ ವಿಷಯದಲ್ಲಿ ಸಂಧ್ಯಾವಂದನೆ ಗಾಯತ್ರಿಯಲ್ಲಿ ಲೀನವಾಗುತ್ತದೆ. ಅದು ಹಾಗಾದಾಗ ಗಾಯತ್ರಿಯನ್ನು ಜಪಿಸಿದರೇ ಬೇಕಾದಷ್ಟು. ಬಳಿಕ ಗಾಯತ್ರಿ ಓಂಕಾರದಲ್ಲಿ ಲಯವಾಗುತ್ತದೆ. ಅದಾದನಂತರ ಗಾಯತ್ರಿಯನ್ನು ಜಪಿಸಬೇಕಾದ ಆವಶ್ಯಕತೆಯೇನಿರುವುದಿಲ್ಲ ; ಆಗ ಕೇವಲ ''ಓಂ'' ಎಂದು ಜಪಿಸುತ್ತಿದ್ದರೇ ಸಾಕು. ಸಂಧ್ಯಾವಂದನಾದಿ ಕರ್ಮಗಳು ಎಲ್ಲಿಯವರೆಗೆ? ಹರಿನಾಮ ಅಥವಾ ರಾಮನಾಮೋಚ್ಚಾರಣೆಯಿಂದ ಪುಲಕವುಂಟಾಗುವುದಿಲ್ಲವೋ, ಪ್ರೇಮಾಶ್ರು ಸುರಿಯುವುದಿಲ್ಲವೋ ಅಲ್ಲಿಯವರೆಗೆ. ಜನ ಹಣಕಾಸುಗಳಿಗಾಗಿ, ವ್ಯಾಜ್ಯ ಗೆಲ್ಲುವುದಕ್ಕಾಗಿ, ಪೂಜಾದಿ ಕರ್ಮಗಳಲ್ಲಿ ತೊಡಗುತ್ತಾರೆ. ಇದು ಒಳ್ಳೆಯದಲ್ಲ.

❁ ಪ್ರತಿಮಾಪೂಜೆ ಮಾಡುವುದರಲ್ಲಿ ತಪ್ಪೇನಿದೆ? 'ಎಲ್ಲಿ ಅಸ್ತಿ, ಭಾತಿ, ಪ್ರಿಯ ಇರುವುವೊ, ಅಲ್ಲೇ ಭಗವಂತನ ವ್ಯಕ್ತತೆಯೂ ಇದೆ ' ಎಂದು ವೇದಾಂತ ಹೇಳುತ್ತದೆ, ಆದ್ದರಿಂದ ಬ್ರಹ್ಮನಿಲ್ಲದ ವಸ್ತುವೇ ಇಲ್ಲ.

ಚಿಕ್ಕ ಹುಡುಗಿಯರು ಎಲ್ಲಿಯವರೆಗೆ ತಮ್ಮ ಗೊಂಬೆಗಳೊಡನೆ ಆಟವಾಡುತ್ತಾರೆ? ವಿವಾಹವಾಗುವವರೆಗೆ ಮತ್ತು ತಮ್ಮ ತಮ್ಮ ಪತಿಯರೊಡನೆ ವಾಸಿಸುವವರೆಗೆ. ವಿವಾಹವಾದ ನಂತರ ಅವರು ಗೊಂಬೆಗಳನ್ನು ಪೆಟ್ಟಿಗೆಯಲ್ಲಿ ಹಾಕಿ ಇಡುತ್ತಾರೆ. ಭಗವಂತನ ಸಾಕ್ಷಾತ್ಕಾರ ದೊರೆತನಂತರ ಪ್ರತಿಮಾಪೂಜೆಯ ಆವಶ್ಯಕತೆ ಎಲ್ಲಿರುತ್ತದೆ?

❁ ಯಾರಿಗೆ ಸಮಯವಿರುವುದೊ, ಅವರು ಧ್ಯಾನ ಭಜನೆ ಮಾಡಲೇಬೇಕು. ಆದರೆ ಯಾರಿಗೆ ಸಮಯವಿಲ್ಲವೊ ಅವರು ದಿನಕ್ಕೆ ಎರಡು ವೇಳೆ ಹೃತ್ಪೂರ್ವಕವಾಗಿ ಭಗವಂತನಿಗೆ ನಮಸ್ಕಾರ ಹಾಕಲಿ. ಆತ ಅಂತರ್ಯಾಮಿ. ಆತನಿಗೆ ಗೊತ್ತಿದೆ. ಇವರು ಇನ್ನೇನು ತಾನೆ ಮಾಡಿಯಾರು, ಇವರಿಗೆ ಬೇಕಾದಷ್ಟು ಕೆಲಸ ಕಾರ್ಯಗಳಿವೆಯಲ್ಲ, ಪಾಪ ಎಂದು. ಆತನನ್ನು ಪ್ರಾರ್ಥಿಸಲು ನಿಮಗೆ ಸಮಯವಿಲ್ಲ; ಆದ್ದರಿಂದ ಆತನಿಗೆ ನಿಮ್ಮ ವಕಾಲತ್ತನ್ನು ವಹಿಸಿಬಿಡಿ. ಆದರೆ ನೋಡಿಕೊಳ್ಳಿ. ಆತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳದೆ ಹೋದಿರಿ ಎಂದರೆ, ಆತನ ದರ್ಶನವನ್ನು ಮಾಡಿಕೊಳ್ಳದೆ ಹೋದಿರಿ ಎಂದರೆ, ಜೀವನ ಬರಿದೆ ವ್ಯರ್ಥವಾದಂತೆ.

❁ ಹೆಸರೇನು ಕಡಮೆಯಾದುದೆ? ಭಗವಂತನಿಗೂ ಆತನ ಹೆಸರಿಗೂ ವ್ಯತ್ಯಾಸವೇನಿಲ್ಲ. ಸತ್ಯಭಾಮೆ ಚಿನ್ನ, ರತ್ನ, ಮಾಣಿಕ್ಯ ಇವುಗಳಿಂದ ಶ್ರೀಕೃಷ್ಣನನ್ನು ತುಲಾಯಂತ್ರದಲ್ಲಿ ತೂಗಲು ಪ್ರಯತ್ನಮಾಡಿದಾಗ ಆಕೆ ತಕ್ಕಡಿ ತಟ್ಟೆಗಳನ್ನು ಒಂದು ಸಮತೂಕಕ್ಕೆ ತರಲಾಗಲಿಲ್ಲ. ಆಗ ರುಕ್ಮಿಣಿ ತುಳಸಿ ಎಲೆಯ ಮೇಲೆ ಕೃಷ್ಣನ ಹೆಸರನ್ನು ಬರೆದು ತೂಕದ ತಟ್ಟೆಗೆ ಹಾಕಿದಳು. ಒಡನೆ ತೂಕ ಸರಿಹೋಗಿಬಿಟ್ಟಿತು.

❁ ಮೊದಲು ತಪಸ್ಸು ಮಾಡಬೇಕು. ಆ ಬಳಿಕವೇ ಭಗವಂತನ ಸಾಕ್ಷಾತ್ಕಾರ. ಶಾಸ್ತ್ರಗಳ ಶ್ಲೋಕಗಳನ್ನೆಲ್ಲ ಕಂಠಪಾಠ ಮಾಡಿಕೊಂಡರೂ ಏನೂ ದೊರೆಯದು.

❁ ಮನಸ್ಸೆಂಬುದು ಅಗಸನ ಮನೆಯ ಬಟ್ಟೆಯ ಹಾಗೆ. ಅದನ್ನು ಯಾವ ಬಣ್ಣದಲ್ಲಿ ಅದ್ದುತ್ತೇವೆಯೋ, ಅದಕ್ಕೆ ಆ ಬಣ್ಣ ಬಂದುಬಿಡುತ್ತದೆ... ಮೊದಲು ಚಿತ್ತಶುದ್ಧಿ ಆಗಬೇಕು. ಬಳಿಕ ಅದನ್ನು ಭಗವಂತನ ಕಡೆಗೆ ತಿರುಗಿಸಿದರೆ ಅದಕ್ಕೆ ಭಗವಂತನ ಬಣ್ಣ ಹತ್ತಿಕೊಂಡುಬಿಡುತ್ತದೆ. ಹಾಗೆ ಮಾಡುವುದನ್ನು ಬಿಟ್ಟು ಅದನ್ನು ಸಂಸಾರದ ಕಡೆಗೆ, ನಾಟ್ಯದ ಕಡೆಗೆ ತಿರುಗಿಸಿದರೆ ಅದಕ್ಕೆ ಆ ಬಣ್ಣ ಬಂದುಬಿಡುತ್ತದೆ.

❁ ಭಗವಂತನ ಪೂಜೆ ಮಾಡಬೇಕಾದರೆ ಅದಕ್ಕೆ ಬೇಕಾಗುವ ಸಿದ್ಧತೆಗಳನ್ನು ಮಾಡಿಕೊಳ್ಳಲು ಬಹಳ ಸಮಯ ಹಿಡಿಯುತ್ತದೆ. ಹೂವು ಕೊಯ್ಯುವುದು. ಚಂದನ ಮಾಡಿಕೊಳ್ಳುವುದು. ಪೂಜಾ ಸಾಮಗ್ರಿಗಳನ್ನು ಬೆಳಗಿಕೊಳ್ಳುವುದು, ನೈವೇದ್ಯಕ್ಕೆ ಸಿದ್ಧತೆ ಮಾಡಿಕೊಳ್ಳುವುದು ಇವೇ ಮೊದಲಾದ ಕೆಲಸಗಳನ್ನು ಮಾಡುವಾಗಲೆಲ್ಲಾ ಮನಸ್ಸು ಭಗವಂತನ ಕಡೆಗೇ ಹರಿಯುತ್ತಿರುತ್ತದೆ. ಹೀನ ಬುದ್ಧಿ, ಕೋಪ, ದ್ವೇಷ ಇವೆಲ್ಲಾ ತೊಲಗಿಹೋಗುತ್ತದೆ. ಮಾತಾಡುವಾಗ ಭಗವಂತನ ವಿಷಯವಾಗಿಯೇ ಮಾತುಕತೆಗಳನ್ನಾಡಿ.

❁ ಮುಖ್ಯವಾಗಿ ಮಾಡಬೇಕಾದುದೇನೆಂದರೆ, ಹೇಗಾದರೂ ಮಾಡಿ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಬೇಕು. ಒಮ್ಮೆಯೂ ಆತನನ್ನು ಮರೆಯಕೂಡದು. ಅದು ತೈಲಧಾರೆಯಂತೆ ಅವಿಚ್ಛಿನ್ನವಾಗಿರಬೇಕು. ಒಂದು ಇಟ್ಟಿಗೆಯನ್ನೇ ಆಗಲಿ ಒಂದು ಕಲ್ಲನ್ನೇ ಆಗಲಿ ಅದೇ ಭಗವಂತ ಎಂದು ಭಾವಿಸಿ ಶ್ರದ್ಧಾ ಭಕ್ತಿಯಿಂದ ಪೂಜಿಸುವುದಾದರೆ, ಭಗವಂತನ ಕೃಪೆಯಿಂದ ಅದರಿಂದಲೇ ಆತನ ದರ್ಶನ ದೊರೆತುಬಿಡುವ ಸಂಭವವಿದೆ.

❁ ಜನರಿಗೆ ಅನ್ನದಾನ ಮಾಡಿದರೆ ಒಂದು ರೀತಿಯಲ್ಲಿ ಭಗವಂತನ ಸೇವೆಯನ್ನೇ ಮಾಡಿದಂತಾಗುತ್ತದೆ. ಅಲ್ಲವೆ? ಎಲ್ಲಾ ಜೀವಿಗಳಲ್ಲಿಯೂ ಆತ ಅಗ್ನಿರೂಪದಲ್ಲಿ ಇದ್ದಾನೆ. ಜನರಿಗೆ ಅನ್ನ ಹಾಕುವುದು ಎಂದರೆ, ಅಂತರ್ಯಾಮಿಯಾಗಿರುವ ಆತನಿಗೆ ಅರ್ಪಿಸಿದಂತೆಯೇ.

ಶ್ರೀರಾಮಕೃಷ್ಣ ವಚನವೇದದಿಂದ